REVIEW OF RESEARCH
ISSN: 2249-894X
IMPACT FACTOR : 5.7631(UIF)
VOLUME - 11 | ISSUE - 4 | JANUARY - 2022

# ಮಲಯಾಳ ಭಾಷೆಯ ರಾಮಾಯಣಗಳು

**ಡಾ. ಶಂಕರ ಭಟ್ ಪಿ**
ಕನ್ನಡ ಸಹಪ್ರಾಧ್ಯಾಪಕರು, ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಕನ್ಯಾನ.




ಮಲಯಾಳ ಭಾಷೆಯಲ್ಲಿ ಕೆಲವು ರಾಮಾಯಣ ಕಾವ್ಯಗಳು ಕಂಡು ಬರುತ್ತವೆ. ಶ್ರೀವೀರ ರಾಮ ವರ್ಮನು 'ರಾಮಚರಿತಂ' ಎಂಬ ಕಾವ್ಯ ರಚಿಸಿದ್ದಾನೆ. ಈತನ ಕಾಲ ಸುಮಾರು ೧೧೯೬ ಎಂದು ಹೇಳಲಾಗಿದೆ. `ಕಣ್ಣಶ್ಶ ರಾಮಾಯಣ'ವು ರಾಮ ಪಣಿಕ್ಕರ್ ಬರೆದ ಕಾವ್ಯ. ಹದಿನಾಲ್ಕನೆಯ ಶತಮಾನ ಈತನ ಕಾಲ. ಕಲ್ಲಿಕೋಟೆಯ ಸಾಮೂದಿರಿಪಾಡನ ಆಸ್ಥಾನ ಕವಿಗಳಲ್ಲಿ ಒಬ್ಬನಾದ ಪುನಂ ನಂಬೂದಿರಿಯು 'ರಾಮಾಯಣ ಚಂಪು'ವನ್ನು ಬರೆದಿದ್ದಾನೆ. ಹದಿನೈದನೆಯ ಶತಮಾನವು ಇವನ ಕಾಲ. ಹದಿನಾರನೆಯ ಶತಮಾನದಲ್ಲಿ ಎಳುತ್ತಚ್ಚನ್ 'ಆಧ್ಯಾತ್ಮ ರಾಮಾಯಣ'ವನ್ನು ರಚಿಸಿದ್ದಾನೆ. ಇದು ಮಲಯಾಳ ಭಾಷೆಯ ಪ್ರಸಿದ್ಧ ಕೃತಿಯಾಗಿದೆ.

ರಾಮಚರಿತಂ :

`ಮಣಿಕಂಠ'ನೆಂದು ಬಿರುದು ಪಡೆದು ತಿರುವಾಂಕೂರು ಆಳಿದ `ಶ್ರೀವೀರ ರಾಮವರ್ಮ' ಮಹಾರಾಜನು ಇದರ ಕರ್ತೃವೆಂದು ಊಹಿಸಿದ್ದಾರೆ. ಯುದ್ಧಕಾಂಡದ ಕಥೆಯೊಂದಿಗೆ ಅಲ್ಲಲ್ಲಿ ಹಿಂದಿನ ಕಥೆಗಳನ್ನು ಹೇಳುವುದು ಕಂಡುಬರುತ್ತದೆ. ಈ ಕಾವ್ಯದ ಭಾಷೆಯು ತಮಿಳು, ಮಲಯಾಳಗಳ ಮಿಶ್ರಣದಿಂದ ಕೂಡಿದೆ. ರಾವಣನು ಪಂಚವಟಿಗೆ ಭಿಕ್ಷುಕವೇಷದಲ್ಲಿ ಬಂದು ಸೀತೆಯನ್ನು ಕೊಂದು ಸನ್ನಿಧಿಗೆ ಕರೆದುಕೊಂಡು ಹೋಗುತ್ತೇನೆಂದು ಹೇಳುತ್ತಾನೆ. ಆಗ ಶೂರ್ಪನಖಿಯು ಅಲ್ಲಿಗೆ ಬಂದು ಸೀತೆಯನ್ನು ಕೊಂದು ಹಾಕುವುದಾಗಿ ಹೆದರಿಸುತ್ತಾಳೆ. ಇದನ್ನು ಕಂಡು ಹೆದರಿ ನಡುಗುತ್ತಿರುವ ಸೀತೆಯನ್ನು ರಾವಣನು ಕರೆದು ರಥವನ್ನು ಏರುವಂತೆ ಹೇಳುತ್ತಾನೆ. ಈ ಕಾವ್ಯದ ವಿಭೀಷಣನು ಸೀತೆಯನ್ನು ಹಿಂತಿರುಗಿಸಲು ರಾವಣನಿಗೆ ತಿಳಿಸುವುದು ಕಂಡುಬರುತ್ತದೆ. ಕುಂಭಕರ್ಣನು ರಾವಣನ ಸಭೆಗೆ ಬರುವುದನ್ನು ಉಜ್ವಲವಾಗಿ ವರ್ಣಿಸುತ್ತಾನೆ. ಶ್ರೀರಾಮ ಪಟ್ಟಾಭಿಷೇಕದ ಸಂದರ್ಭದಲ್ಲಿ ನಾರದ ಮಹರ್ಷಿಯು ಒಂದು ದೀರ್ಘವಾದ ವಿಷ್ಣುಸ್ತೋತ್ರವನ್ನು ಹೇಳುತ್ತಾನೆ. ರಾಮ ಮತ್ತು ಪರಶುರಾಮರು ಪರಸ್ಪರ ಎದುರಾಗುವ ಸಂದರ್ಭವು ಮೂಲಕ್ಕಿಂತ ಭಿನ್ನವಾಗಿದೆ.

ಕಣ್ಣಶ್ಶರಾಮಾಯಣ :

ಕೇರಳದ ನಿರಣಂ ಎಂಬ ಸ್ಥಳದಲ್ಲಿ ಕಣ್ಣಶನ್ ಎಂಬ ಕವಿಯ ಕುಟುಂಬದ ಮಾಧವ ಪಣಿಕ್ಕರ್, ಶಂಕರ ಪಣಿಕ್ಕರ್ ಮತ್ತು ರಾಮ ಪಣಿಕ್ಕರ್ ಎಂಬವರಿದ್ದರು. ಈ ಮೂವರು ಕವಿಗಳಾಗಿದ್ದು ಇವರ ಕೃತಿಗಳನ್ನು ಕಣ್ಣಶ ಕೃತಿಗಳೆನ್ನುತ್ತಾರೆ. ಕಣ್ಣಶ ಎಂಬುದು 'ಕರುಣೇಶ' ಎಂಬ ಸಂಸ್ಕೃತ ಶಬ್ದದ ತದ್ಭವ ರೂಪ. ರಾಮ ಪಣಿಕ್ಕರ್ ಬರೆದ ರಾಮಾಯಣ ಕೃತಿಯನ್ನು 'ಕಣ್ಣಶ್ಶ ರಾಮಾಯಣ' ಎಂದು ಕರೆಯುತ್ತಾರೆ. ಈ ಕಾವ್ಯದಲ್ಲಿ ರಾಮನನ್ನು ಆಕ್ರಮಣ ಮಾಡುವುದಕ್ಕೆ ಬಯಸಿದ ಪರಶುರಾಮನನ್ನು ರಾಮನು ಸಮಾಧಾನ ಮಾಡುತ್ತಾನೆ. ಮಾತುಗಳಲ್ಲಿ ವ್ಯಂಗ್ಯವು ಗೋಚರವಾಗುತ್ತದೆ. `ಪೂಜ್ಯ ಸಂನ್ಯಾಸಿಯೇ ನೀವು ಕ್ಷತ್ರಿಯರನ್ನು ಸಂಹಾರ ಮಾಡಿದ್ದೀರಿ. ಕ್ಷತ್ರಿಯರನ್ನು

ಕೊಂದು ಬದುಕಿ ಉಳಿದ ನೀವು ಕ್ಷತ್ರಿಯರಲ್ಲವೇ' ಎಂದು ರಾಮನು ಹೇಳುತ್ತಾನೆ. ಈ ಮಾತುಗಳನ್ನು ಕೇಳಿ ಪರಶುರಾಮನಿಗೆ ಸಿಟ್ಟು ಬರುತ್ತದೆ.

**ರಾಮಾಯಣ ಚಂಪು :**

ಪುನಂ ನಂಬೂದಿರಿಯು ಇದರ ಕರ್ತೃ. ವಾಲ್ಮೀಕಿ ರಾಮಾಯಣವನ್ನು ಅನುಸರಿಸಿದರೂ ಅಗತ್ಯಕ್ಕೆ ತಕ್ಕಂತೆ ಕೆಲವು ಕಡೆ ಕಥೆಯನ್ನು ಸಂಕುಚಿತಗೊಳಿಸಿ, ಕೆಲವು ಕಡೆ ಕಥೆಯನ್ನು ವಿಸ್ತಾರ ಮಾಡಿದ್ದಾನೆ. ಸೀತೆಯು ಸ್ವಯಂವರದ ಸಭೆಗೆ ಹೋಗುವ ಶೈಲಿಯ ರ್ಣನೆಯು ಕಾವ್ಯದಲ್ಲಿ ಕಂಡುಬರುತ್ತದೆ. ಸೀತೆಯ ಮದುವೆಯ ಆಚರಣೆಯ ಸಂದರ್ಭವು ಸ್ತ್ರೀಯರ ಅಲಂಕಾರ, ವರ್ಣನೆಗಳಿಂದ ಕೂಡಿದೆ. ಮಿಥಿಲೆ, ಅಯೋಧ್ಯೆಗಳ ಜನರನ್ನು ಕೇರಳದ ಜನರೆಂಬ ರೀತಿಯಲ್ಲಿ ವರ್ಣನೆ ಮಾಡುತ್ತಾನೆ. ನಾಯರ್, ನಂಬೂದಿರಿಗಳು ಸೀತೆಯ ವಿವಾಹಕ್ಕೆ ಬರುವ ವಿಚಾರ ಕಂಡುಬರುತ್ತದೆ. ಸೀತಾ ವಿವಾಹಕ್ಕೆ ಬರುವ ಜನರು ದಾರಿಯಲ್ಲಿ ಆಯಾಸ, ಬಾಯರಿಕೆಯಾದಾಗ ಸೀಯಾಳವನ್ನು ಕುಡಿದ ವಿಚಾರ ತಿಳಿಸುತ್ತಾರೆ. ರಾಮನನ್ನು ಸೀತೆಯು ಮರೆಯುವಂತೆ ರಾವಣನು ಪ್ರಯತ್ನಿಸುವ ವಿಧಾನವು ಮೂಲ ರಾಮಾಯಣಕ್ಕಿಂತ ಭಿನ್ನವಾಗಿದೆ. ದೊಡ್ಡವನಿಗೆ ಚಿಕ್ಕವಳು, ತೋರದ ಮದುಮಗನಿಗೆ ತೆಳ್ಳಗಿನ ಮದುಮಗಳು ಸಿಕ್ಕಿದರೆ ಹೇಗೋ ಹಾಗೆ ಸೀತೆಗೆ ರಾಮನು ಸಾಮಾನನಲ್ಲ. ರಾಮನು ಚಿಕ್ಕವನಾಗಿದ್ದಾಗ ಸಂನ್ಯಾಸಿಯ ದೂತನಾಗಿ ಹೋದ ವ್ಯಕ್ತಿ. ಹಳೆಯ ಬಿಲ್ಲೊಂದನ್ನು ಮುರಿದ ಕಾರಣ ಸೀತೆಯನ್ನು ಮದುವೆಯಾಗುವಂತಾಯಿತು. ರಾಮನು ವನವಾಸಕ್ಕೆ ಹೋಗುವಾಗ ವನವಾಸ ಮುಗಿದ ಬಳಿಕ ರಾಜ್ಯಕ್ಕೆ ಹಿಂತಿರುಗುವ ಆಸೆ ಹೊಂದುತ್ತಾನೆ. ಈ ವಿಚಾರ ಭರತನಿಗೆ ತಿಳಿದಿದೆ. ಪುನಃ ಅಯೋಧ್ಯೆಗೆ ಹೋದರೆ ಭರತನ ಪೆಟ್ಟಿನಿಂದ ರಾಮನ ಹಲ್ಲುಗಳು ಉದುರಿ ಹೋದೀತು ಎಂದು ರಾವಣನು ಸೀತೆಯಲ್ಲಿ ಹೇಳುವ ಸಂದರ್ಭ ಕಂಡುಬರುತ್ತದೆ.

**ಅಧ್ಯಾತ್ಮ ರಾಮಾಯಣ :**

ಹದಿನಾರನೇ ಶತಮಾನದ ಕವಿ ಎಳುತ್ತಚ್ಛನ್. ಇವನು ಬರೆದ ಕಾವ್ಯ 'ಅಧ್ಯಾತ್ಮ ರಾಮಾಯಣ'. ಸಂಸ್ಕೃತದ 'ಅಧ್ಯಾತ್ಮ ರಾಮಾಯಣ'ವು ಈ ಕಾವ್ಯಕ್ಕೆ ಆಧಾರ. ಆದರೆ ಕೆಲವು ಬದಲಾವಣೆಗಳನ್ನು ಮಾಡಿ ಎಳುತ್ತಚ್ಛನ್ ಕಾವ್ಯ ಬರೆದಿರುವುದು ಕಂಡುಬರುತ್ತದೆ. ಮೂಲದಲ್ಲಿರುವ ಯಾವ ವಿಷಯವನ್ನೂ ಕೈಬಿಡದೆ ಕಥೆಯನ್ನು ಸಂಕ್ಷೇಪಿಸುವುದರಲ್ಲಿ ಈತನು ಸಮರ್ಥನಾದ ಕವಿ. ಮಲಯಾಳ ಮತ್ತು ಸಂಸ್ಕೃತ ಶಬ್ದಗಳನ್ನು ಒಂದು ವಿಶಿಷ್ಟ ರೀತಿಯಲ್ಲಿ ಸಂಯೋಜಿಸಿರುವುದು ಈ ಕಾವ್ಯದ ವೈಶಿಷ್ಟ್ಯ. ಎಳುತ್ತಚ್ಛನ ರಾಮಾಯಣವು ಮನೆಗೊಂದು ಪುಸ್ತಕ ಎಂಬ ದೃಷ್ಟಿಯಲ್ಲಿ ಕೇರಳದಲ್ಲಿ ಪ್ರಸಿದ್ಧಿ ಪಡೆದಿರುವುದು ವಿಶೇಷ. ಇದು ಕೇರಳೀಯರ ಪಾರಾಯಣ ಗ್ರಂಥವೂ ಆಗಿದೆ. ಗಿಳಿಯ ಬಾಯಿಯಿಂದ ಕಥೆ ಹೇಳಿಸುವ ಪದ್ಧತಿ ಮಲಯಾಳ ಸಾಹಿತ್ಯದಲ್ಲಿ ಹಿಂದಿನಿಂದಲೂ ಕಂಡುಬರುತ್ತದೆ. ಇದನ್ನು ಕಿಳಿಪ್ಪಾಟ್ಟು ಎನ್ನುತ್ತಾರೆ. ಎಳುತ್ತಚ್ಛನ್ ಹಳೆಯ ಪದ್ಧತಿಗಿಂತ ಭಿನ್ನವಾಗಿ ಗಾನಾತ್ಮಕವಾದ ವೃತ್ತಗಳನ್ನು ಬಳಸಿ ಹೊಸ ರೀತಿಯ ಭಕ್ತಿ ಭರಿತ ಕಾವ್ಯ ಬರೆದಿರುವುದು ವಿಶೇಷತೆಯಾಗಿದೆ. ಶ್ರೀರಾಮನ ಬಾಲ್ಯಕಾಲದ ವರ್ಣನೆ, ಪರಶುರಾಮನೊಂದಿಗೆ ಯುದ್ಧ, ಶೂರ್ಪನಖಿಯ ಪ್ರವೇಶ, ವಾಲಿವಧೆ, ಲಂಕಾದಹನ, ಲಕ್ಷ್ಮಣೋಪದೇಶ, ತಾರೆಯ ಸಾಂತ್ವನ ಮೊದಲಾದ ಭಾಗಗಳಲ್ಲಿ ಎಳುತ್ತಚ್ಛನು ಸ್ವಂತಿಕೆಯನ್ನು ತೋರಿಸುತ್ತಾನೆ.

ಪಾರ್ವತಿಗೆ ಪರಮೇಶ್ವರನು ಉಪದೇಶ ಕೊಡುವ ರೀತಿಯಲ್ಲಿ ಕಥೆಯನ್ನು ಎಳುತ್ತಚ್ಛನ್ ತಿಳಿಸುತ್ತಾನೆ. ರಾಕ್ಷಸರ ವಧೆಗಾಗಿ ರಾಮನ ಜನನವಾಗುತ್ತದೆ. ರಾಮನಿಗೆ ಪಟ್ಟಾಭಿಷೇಕವಾದರೆ ರಾಕ್ಷಸರ ವಧೆಯ ಉದ್ದೇಶ ಈಡೇರಲಾರದು. ಆದ್ದರಿಂದ ದೇವರ ಸಂಕಲ್ಪದಂತೆ ಮಂಥರೆಯು ಕೈಕೆಗೆ ದುರ್ಬೋಧನೆ ಮಾಡಿ ವರವನ್ನು ಕೇಳುವಂತೆ ಮಾಡುತ್ತಾಳೆ. ಇಲ್ಲಿ ಮಂಥರೆಯು ಕೆಳವರ್ಗದವಳು, ಬಾಲಕ ರಾಮನು ಚಂದ್ರನನ್ನು ಆಶಿಸಿ ಹಟ ಹಿಡಿದಾಗ ಯಾರಿಂದಲೂ ಅದನ್ನು ಪರಿಹರಿಸುವುದಕ್ಕೆ ಅಸಾಧ್ಯವಾಗುತ್ತದೆ. ಆಗ ಮಂಥರೆಯು ಕನ್ನಡಿಯ ಮೂಲಕ ಚಂದ್ರನನ್ನು ತೋರಿಸುವ ಉಪಾಯ ಹೇಳುತ್ತಾಳೆ. ಇದರಿಂದ ಬಾಲಕ ರಾಮನು ಸಮಾಧಾನ ಹೊಂದುತ್ತಾನೆ. ಮಂಥರೆಯು ಬಾಲಕ ರಾಮನನ್ನು ಎತ್ತುವುದಕ್ಕೆ ಹೋದಾಗ, ಕೌಸಲ್ಯೆಯು ಎತ್ತಲು ಬಿಡುವುದಿಲ್ಲ. ಇದರಿಂದಾಗಿ ಮೇಲುವರ್ಗದ ಕೌಸಲ್ಯೆಯ ಮೇಲೆ ಮಂಥರೆಗೆ ಹಗೆಯಾಗುತ್ತದೆ. ಅವಳಿಗೆ ರಾಮನಲ್ಲಿ ನೇರವಾಗಿ ಹಗೆಯಿಲ್ಲ. ದೇವರ ಪ್ರೇರಣೆಯ

ಪರಿಣಾಮವಾಗಿ ಮಂಥರೆಯು ಕೈಕೆಗೆ ದುರ್ಬೋಧನೆ ಮಾಡುತ್ತಾಳೆ. ದೇವರ ಪ್ರೇರಣೆ ಇಲ್ಲದಿದ್ದರೆ ಬುದ್ಧಿವಂತಳಾದ ಕೈಕೆಯು ಮಂಥರೆಯ ಮಾತನ್ನು ಕೇಳುತ್ತಿರಲಿಲ್ಲ.

ಶಿವ ಧನುಸ್ಸನ್ನು ರಾಮನು ಮುರಿದನೆಂದು ತಿಳಿದು ಪರಶುರಾಮನು ಸಿಟ್ಟಿನಿಂದ ಬರುತ್ತಾನೆ. ಪರಶುರಾಮನು ರಾಮನಲ್ಲಿ ಬಿಲ್ಲನ್ನು ಯಾಕೆ ಮುರಿದೆ ಎಂದು ಪ್ರಶ್ನಿಸುತ್ತಾನೆ. ಹಳೆಯ ಬಿಲ್ಲಾಗಿರುವುದರಿಂದ ನಾನು ಎತ್ತುವಾಗಲೇ ಮುರಿದುಹೋಯಿತೆಂದು ರಾಮನು ಹೇಳುವುದು ಕಂಡುಬರುತ್ತದೆ. ಆಗ ಪರಶುರಾಮನು ತನ್ನ ವೈಷ್ಣವ ಚಾಪವನ್ನು ತೋರಿಸಿ, ಎತ್ತಲು ಹೇಳುತ್ತಾನೆ. ಅದನ್ನು ರಾಮನು ಎತ್ತಿ, ಬಾಣವನ್ನು ಎಲ್ಲಿಗೆ ಪ್ರಯೋಗಿಸಬೇಕೆಂದು ಕೇಳುತ್ತಾನೆ. ಹಿಮಾಲಯದಲ್ಲಿದ್ದ ದಸ್ಯುಗಳಿಗೆ ಅದನ್ನು ಪ್ರಯೋಗಿಸಲು ಸೂಚಿಸುತ್ತಾನೆ. ಈ ಪ್ರಕರಣದಿಂದ ಪರಶುರಾಮನು ರಾಮನನ್ನು ದೇವರೆಂದು ತಿಳಿಯುತ್ತಾನೆ. ದೇವರಿಬ್ಬರ ಅಗತ್ಯ ಒಟ್ಟಿಗೇ ಇಲ್ಲವೆಂದು ಪರಶುರಾಮನು ರಾಮನಿಗೆ ದೇವರ ಅಧಿಕಾರವನ್ನು ನೀಡುತ್ತಾನೆ. ವಾಲಿಯು ಸುಗ್ರೀವನ ಮಡದಿ ರುಮೆಯನ್ನು ಬಯಸಿ ತಪ್ಪು ಮಾಡಿರುತ್ತಾನೆ. ಸುಗ್ರೀವ ಮತ್ತು ರಾಮ ಇಬ್ಬರೂ ಮಡದಿಯನ್ನು ಕಳೆದುಕೊಂಡಿರುವುದರಿಂದ ಸಮಾನ ದುಃಖಿಗಳು. ಇದರಿಂದಾಗಿ ಅವರಲ್ಲಿ ಸಖ್ಯವಾಗುತ್ತದೆ. ವಾಲಿಯು ಸುಗ್ರೀವನ ಮಡದಿಯನ್ನು ತನ್ನ ವಶದಲ್ಲಿರಿಸಿದ ತಪ್ಪಿಗಾಗಿ ರಾಮನು ವಾಲಿಯ ಬೆನ್ನಿಗೆ ಬಾಣ ಪ್ರಯೋಗಿಸುತ್ತಾನೆ. ಬಾಣ ತಾಗಿದ ವಾಲಿಯು ಯಾಕೆ ಹೀಗೆ ಮಾಡಿದಿ, ನಿನ್ನ ಸೀತೆಯನ್ನು ನಾನು ಬಿಡಿಸಿ ತರುತ್ತಿದ್ದೆನೆಂದು ಹೇಳುತ್ತಾನೆ. ಆಗ ರಾಮನು ನೀನು ತಪ್ಪು ಮಾಡಿರುವುದರಿಂದ ನಾನು ನಿನಗೆ ಶಿಕ್ಷೆ ನೀಡಿದ್ದೇನೆ ಎಂದು ಹೇಳುತ್ತಾನೆ. ನಿನ್ನ ತಂದೆ ನಿನಗೆ ಕೊಟ್ಟ ಹಾರ ನಿನ್ನ ಕೊರಳಲ್ಲಿರುವಾಗ ಎದುರಿಗೆ ನಿಂತು ಯುದ್ಧ ಮಾಡುವವನ ಅರ್ಧ ಬಲ ನಿನಗೆ ಬರುತ್ತದೆ. ಇದರಿಂದಾಗಿ ನಾನು ನಿನ್ನ ಬೆನ್ನಿಗೆ ಬಾಣ ಪ್ರಯೋಗಿಸಬೇಕಾಯಿತೆಂದು ರಾಮನು ಹೇಳುತ್ತಾನೆ.

ಶೂರ್ಪನಖಿಯು ಸುಂದರವಾದ ರೂಪದಿಂದ ರಾಮ ಲಕ್ಷ್ಮಣರಲ್ಲಿಗೆ ಬರುತ್ತಾಳೆ. ರಾಮ ಲಕ್ಷ್ಮಣರು ಅವಳನ್ನು ಹಾಸ್ಯ ಮಾಡಿದಾಗ ಅವಳು ಸೀತೆಯನ್ನು ಹಿಡಿಯಲು ಹೋಗುತ್ತಾಳೆ. ಆಗ ಲಕ್ಷ್ಮಣನು ಅವಳ ಮೂಗನ್ನು ಕತ್ತರಿಸುತ್ತಾನೆ. ಮಂಡೋದರಿಯು ಋಷಿಗಳ ರಕ್ತವನ್ನು ಕುಡಿದ ಪರಿಣಾಮವಾಗಿ ಹುಟ್ಟಿದವಳು ಸೀತೆ. ದೈವಾಂಶದಿಂದ ಹುಟ್ಟಿದ ಸೀತೆಯು ಬೇಡವೆಂದು ರಾವಣನು ಅವಳನ್ನು ಪೆಟ್ಟಿಗೆಯಲ್ಲಿಟ್ಟು ಎಸೆದು ಬಿಡುತ್ತಾನೆ. ಅವಳು ಮಿಥಿಲೆಯ ಜನಕನಿಗೆ ಸಿಗುತ್ತಾಳೆ. ರಾವಣನು ಸೀತೆಯನ್ನು ಕದ್ದು ತರುತ್ತಾನೆ. ನಿಜವಾಗಿ ರಾವಣನಿಗೆ ಸೀತೆಯಲ್ಲಿ ಆಸೆಯಿರಲಿಲ್ಲ ಶೂರ್ಪನಖಿಯ ಪ್ರೇರಣೆಯೇ ಇದಕ್ಕೆ ಕಾರಣ. ರಾವಣನ ತಪಸ್ಸಿಗೆ ಮೆಚ್ಚಿ ಬ್ರಹ್ಮನು ರಾವಣನ ನಾಭಿಮೂಲಕ್ಕೆ ಅಮೃತ ಕುಂಭವನ್ನು ನೀಡುತ್ತಾನೆ. ಅದು ಇರುವವರೆಗೆ ರಾವಣನಿಗೆ ಸೋಲು ಬರುವುದಿಲ್ಲ. ರಾಮನು ವೈಷ್ಣವಾಸ್ತ್ರದಿಂದ ರಾವಣನ ನಾಭಿಮೂಲದಲ್ಲಿದ್ದ ಅಮೃತ ಕುಂಭವನ್ನು ತೆಗೆಯುತ್ತಾನೆ.

ಎಳುತ್ತಚ್ಛನ 'ಅಧ್ಯಾತ್ಮ ರಾಮಾಯಣ'ವು ಹದಿನಾರನೇ ಶತಮಾನದ ಕಾವ್ಯ. ಈ ಕಾವ್ಯದಲ್ಲಿ ಕೆಲವು ಪ್ರತ್ಯೇಕತೆಗಳು ಕಂಡುಬರುತ್ತವೆ. ಬಾಲಕ ರಾಮನು ಚಂದ್ರನನ್ನು ಬಯಸುವುದು, ಮಂಥರೆ ಕನ್ನಡಿಯನ್ನು ತೋರಿಸುವ ಉಪಾಯ ಹೇಳುವುದು ಎಳುತ್ತಚ್ಛನ ಹೊಸ ಚಿತ್ರಣ. ಶ್ರೀರಾಮಾಯಣ ದರ್ಶನಂ'ದಲ್ಲಿಯೂ ಇದೇ ರೀತಿಯ ಚಿತ್ರಣ ಕಂಡುಬರುತ್ತದೆ. ಮಂಥರೆಯ ದ್ವೇಷದ ಕಾರಣವು ಎಳುತ್ತಚ್ಛನ ಕಾವ್ಯದಲ್ಲಿದೆ. 'ಶ್ರೀರಾಮಾಯಣ ದರ್ಶನಂ' ಕಾವ್ಯದಲ್ಲಿ ಆ ಕಾರಣವು ಬೇರೆ ರೀತಿಯಲ್ಲಿ ಕಾಣಿಸುತ್ತದೆ. ಕುವೆಂಪು ಅವರು ಎಳುತ್ತಚ್ಛನ ಕಾವ್ಯದ ಕಥೆಯನ್ನು ತಿಳಿದಿರಬೇಕು. ಅಲ್ಲಿಂದಲೇ ಪ್ರೇರಣೆ ಪಡೆದಿರಬೇಕು. ಕುವೆಂಪು ಅವರು ಪೂರ್ವಕವಿಗಳಿಗೆ ನಮಸ್ಕರಿಸುವ ಸಂದರ್ಭದಲ್ಲಿ ಎಳುತ್ತಚ್ಛನ ಹೆಸರನ್ನು ಹೇಳಲಿಲ್ಲ ಆದರೆ ಅಲ್ಲಿ

"ಹಳಬರಿಗೆ ಹೊಸಬರಿಗೆ ಹಿರಿಯರಿಗೆ ಕಿರಿಯರಿಗೆ
ಕಾಲ ದೇಶದ ನುಡಿಯ ಜಾತಿಯ ವಿಭೇದಮಂ
ಲೆಕ್ಕಿಸದೆ ಜಗತೀ ಕಲಾಚಾರ್ಯರೆಲ್ಲರ್ಗೆ"

ಎಂದು ಹೇಳಿರುವುದು ಕಂಡುಬರುತ್ತದೆ. ದೇಶ, ಕಾಲ, ಭಾಷಾ ಜಾತಿಯ ವಿಭೇದವನ್ನು ತೊರೆದು ಜಗತ್ತಿನ ಎಲ್ಲ ಕಲಾಚಾರ್ಯರಿಗೆ ಕುವೆಂಪು ಅವರು ನಮಸ್ಕರಿಸುತ್ತಾರೆ. ಎಳುತ್ತಚ್ಛನ ಹೆಸರು ಹೇಳದಿದ್ದರೂ ಎಲ್ಲಾ ಕವಿಗಳನ್ನು ಸ್ಮರಿಸಿ ಕೃತಜ್ಞತೆ ಸಲ್ಲಿಸಿರುವುದು ಕಂಡುಬರುತ್ತದೆ.

ಎಳುತ್ತಚ್ಛನ ಕೃತಿಯಲ್ಲಿ ರಾಮ ಪರಶುರಾಮರ ಭೇಟಿಯ ಸಂದರ್ಭ ನಾವೀನ್ಯತೆಯಿಂದ ಕೂಡಿದೆ. ವಾಲಿಯ ಎದುರು ನಿಂತು ಯುದ್ಧ ಮಾಡುವವನ ಅರ್ಧ ಬಲ ವಾಲಿಗೆ ಬರುತ್ತದೆ ಎಂಬ ವಿಚಾರ ಎಳುತ್ತಚ್ಛನ ಮತ್ತು ಕುವೆಂಪು ಅವರ ಕೃತಿಗಳಲ್ಲಿವೆ. `ಆಧ್ಯಾತ್ಮ ರಾಮಾಯಣ'ದಲ್ಲಿ ವಾಲಿಯ ತಂದೆಯು ವಾಲಿಗೆ ಹಾರ ನೀಡಿದ ವಿಚಾರವಿದ್ದರೆ, `ಶ್ರೀರಾಮಾಯಣ ದರ್ಶನಂ' ಕಾವ್ಯದಲ್ಲಿ ಬ್ರಹ್ಮನ ವರ ಲಭಿಸಿರುವ ವಿಚಾರವಿದೆ. ಇಲ್ಲಿ ಎಳುತ್ತಚ್ಛನ ಕೃತಿಯು ಕುವೆಂಪು ಅವರ ಮೇಲೆ ಪ್ರಭಾವ ಬೀರಿದಂತಿದೆ. `ಆಧ್ಯಾತ್ಮ ರಾಮಾಯಣ' ಮತ್ತು `ಶ್ರೀರಾಮಾಯಣ ದರ್ಶನಂ'ಎರಡು ಕೃತಿಗಳಲ್ಲಿಯೂ ಶೂರ್ಪನಖಿಯು ಸುಂದರವಾದ ರೂಪದಿಂದ ರಾಮ ಲಕ್ಷ್ಮಣರಲ್ಲಿಗೆ ಬರುತ್ತಾಳೆ. ಇಲ್ಲಿಯೂ ಕುವೆಂಪು ಅವರು ಎಳುತ್ತಚ್ಛನಿಂದ ಪ್ರೇರಣೆ ಪಡೆದಿರಬಹುದು.

ವಾಲ್ಮೀಕಿ ರಾಮಾಯಣದಲ್ಲಿ ಇಲ್ಲದಿರುವ ಕೆಲವು ಚಿತ್ರಣಗಳು 'ಕಂಬರಾಮಾಯಣ', 'ಆಧ್ಯಾತ್ಮ ರಾಮಾಯಣ' ಮತ್ತು 'ಶ್ರೀರಾಮಾಯಣ ದರ್ಶನಂ' ಕಾವ್ಯಗಳಲ್ಲಿ ಕಂಡು ಬರುತ್ತವೆ. ಹೊಸ ಚಿತ್ರಣವನ್ನು ನೀಡುವುದರಲ್ಲಿ ಒಬ್ಬರಿಂದ ಮತ್ತೊಬ್ಬರು ಪ್ರೇರಣೆ ಪಡೆದಿರಬಹುದು. ಆದರೆ ಪ್ರತಿಯೊಬ್ಬ ಕವಿಯೂ ಹಿಂದಿನ ಪ್ರೇರಣೆಗಳಿಂದ ತಮ್ಮ ಕಾವ್ಯದಲ್ಲಿ ಸ್ವಂತಿಕೆಯನ್ನು ತೋರಿಸುತ್ತಾರೆ. ರಾಮನು ಚಿಕ್ಕವನಾಗಿದ್ದಾಗ ಮಣ್ಣಿನ ಹೆಂಟೆಯಿಂದ ಮಂಥರೆಗೆ ಹೊಡೆದದ್ದು ಮಂಥರೆಯ ದ್ವೇಷಕ್ಕೆ `ಕಂಬರಾಮಾಯಣ'ದ ಕಾರಣ. `ರಂಗನಾಥ ರಾಮಾಯಣ'ದಲ್ಲಿ ರಾಮನು ಚೆಂಡನ್ನು ಮಂಥರೆಯ ಕಾಲಿಗೆ ಹೊಡೆದ ಕಾರಣ ಮಂಥರೆಗೆ ರಾಮನಲ್ಲಿ ದ್ವೇಷವುಂಟಾಗುತ್ತದೆ. ಎಳುತ್ತಚ್ಛನ 'ಅಧ್ಯಾತ್ಮ ರಾಮಾಯಣ'ದಲ್ಲಿ ಮೇಲುವರ್ಗದ ಕೌಸಲ್ಯೆಯು ಮಾಡಿದ ಅಪಮಾನ ಮಂಥರೆಯ ದ್ವೇಷಕ್ಕೆ ಕಾರಣವಾಗುತ್ತದೆ. 'ಶ್ರೀರಾಮಾಯಣ ದರ್ಶನಂ' ದಲ್ಲಿ ಕೌಸಲ್ಯೆಯು ಮಂಥರೆಯನ್ನು ತಿರಸ್ಕರಿಸಿದ್ದು ಮಂಥರೆಯ ದ್ವೇಷಕ್ಕೆ ಕಾರಣ. ಇಂಥ ಚಿತ್ರಣದಲ್ಲಿ ಒಬ್ಬರಿಂದ ಇನ್ನೊಬ್ಬ ಪ್ರೇರಣೆ ಪಡೆದುದು ಮಾತ್ರವಲ್ಲ ಸ್ವಂತಿಕೆಯನ್ನೂ ತೋರಿಸುತ್ತಾರೆ. 'ಕಂಬ ರಾಮಾಯಣ'ದಿಂದ 'ರಂಗನಾಥ ರಾಮಾಯಣ', ಈ ಎರಡು ಕಾವ್ಯಗಳಿಂದ ಎಳುತ್ತಚ್ಛನ ` ಅಧ್ಯಾತ್ಮ ರಾಮಾಯಣ', ಇವುಗಳೆಲ್ಲವುಗಳಿಂದ ಕುವೆಂಪು ಪ್ರೇರಣೆ ಪಡೆದಿರಬೇಕು. 'ಕಂಬ ರಾಮಾಯಣ'ಕ್ಕೆ ಪ್ರೇರಣೆ ನೀಡಿದ ಕೃತಿಯೊಂದು ಇದ್ದಿರುವುದಕ್ಕೂ ಸಾಧ್ಯವೆಂದು ಇದರಿಂದ ತಿಳಿಯಬಹುದಾಗಿದೆ.

### ಗ್ರಂಥ ಋಣ :

೧. A History of Malayalam Literature-Krishna Chaitanya, A Survery of Malayalam Literature –K.M.George,
೨. ಮಲೆಯಾಳ ಭಾಷೆ ಮತ್ತು ಸಾಹಿತ್ಯ – ಯು. ಪಿ. ಉಪಾಧ್ಯಾಯ,
೩. ಮಲಯಾಳ ಸಾಹಿತ್ಯ ಚರಿತ್ರೆ – ಅನುವಾದ – ಕಯ್ಯಾರ ಕಿಞ್ಞಣ್ಣ ರೈ,
೪. ಶ್ರೀರಾಮಾಯಣ ದರ್ಶನಂ ಒಂದು ವಿಮರ್ಶಾತ್ಮಕ ಅಧ್ಯಯನ – ಎಚ್. ಜೆ. ಲಕ್ಕಪ್ಪ ಗೌಡ,
೫. ಶ್ರೀರಾಮಾಯಣ ದರ್ಶನಂ -ಕುವೆಂಪು